## 20. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಗ್ರಹಾರ ಮುಚಡಿ ಶಿಕಾರಿಪುರ ತಾ.

### "ಶಾಲಾ ಧ್ಯೇಯ ವಾಖ್ಯ"

### "ಶಿಕ್ಷಣದ ಜ್ಯೋತಿ ಹತ್ತಿಸಿ ಜ್ಞಾನದ ಜ್ಯೋತಿ ಬೆಳಗಿಸೋಣ"



**ಶಾಲೆ ಸಂಕ್ಷಿಪ್ತ ಮಾಹಿತಿ:-**

ನಮ್ಮ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಗ್ರಹಾರ ಮುಚಡಿ, ಶಿಕಾರಿಪುರ ತಾಲೂಕ ಶಿವಮೊಗ್ಗ ಜಿಲ್ಲೆ, ಮಂಜೂರಾದ ಹುದ್ದೆಗಳು 05, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ 05, ಇಲ್ಲಿ 1 ರಿಂದ 7ನೇ ತರಗತಿಯ ವರೆಗೆ ಒಟ್ಟು 116 ವಿದ್ಯಾರ್ಥಿಗಳಿದ್ದು. ನಲಿ  ಕಲಿ ತರಗತಿಗಳಿಗೆ 1ನೇ ತರಗತಿಗೆ-18, 2ನೇ ತರಗತಿಗೆ-14, 3ನೇ ತರಗತಿಗೆ-17 ವಿದ್ಯಾರ್ಥಿಗಳಿದ್ದಾರೆ.



**ಶಾಲಾ ಪರಿಸರ:-** ನಮ್ಮ ಶಾಲಾ ಪರಿಸರವು ಸುಂದರವಾಗಿ, ಸ್ವಚವಾಗಿ, ಆಕರ್ಷಣಿಯವಾಗಿದೆ. ಶಾಲೆಯ ಸುತ್ತಲು ಸುಮಾರು 50 ರಿಂದ 60 ತೆಂಗಿನ ಮರಗಳು, ತೆಗದ ಮರಗಳು ಹಾಗೂ ಸುಮಾರು 120 ಇತರೆ ಶೋ ಗಿಡಗಳು ಇದು ಶಾಲಾ ಆವರಣವನ್ನು, ಶಾಲಾ ಪರಿಸರವನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಿವೆ.



ಶಾಲಾ ಸುತ್ತಲು ಬ್ರುಹತ ಪ್ರಮಾಣದಲ್ಲಿ ಕಂಪೌಂಡ್ ವ್ಯವಸ್ಥೆ ಇದು ಶಾಲೆಯ ಕೈತೊಟವನ್ನು ಹಾಗೂ ಶಾಲಾ ಸುತ್ತಲಿರುವ ಅಲಂಕಾರಿಕ ಗಿಡಗಳನ್ನ ರಕ್ಷಣೆ ಮಾಡುತ್ತಿವೆ.



**ನಲಿ ಕಲಿ ಕಾರ್ಡಗಳ ಜೋಡಣೆ:-** ನಮ್ಮ ಶಾಲೆಯಲ್ಲಿ ನಲಿ ಕಲಿಗೆ ಸಂಬಂಧಿಸಿದಂತೆ ಕಾರ್ಡಗಳ ಜೋಡಣೆಗಾಗಿ, ಹಾಗೂ ವಿದ್ಯಾರ್ಥಿಗಳಿಗೆ ಸುಲಭವಾಗಿ ಕಾರ್ಡಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಹೊಸ ಮಾದರಿಯಲ್ಲಿ ನಲಿ ಕಲಿ ಕಾರ್ಡುಗಳ ಜೋಡಣ ಮಾದರಿಗಳನ್ನು ಸುಮಾರು 2000ರೂ ಗಳ ವೆಚ್ಚದಲ್ಲಿ ತಯಾರಿಸಿಕೊಡಿರುತ್ತೆವೆ, ವೃತ್ತಾಕಾರದಲ್ಲಿ ಬೇರಿಂಗ ಅಳವಡಿಸಿ ವೃತ್ತಾಕಾರವಾಗಿ ಸರಳವಾಗಿ ಚಲಿಸಿ ವಿದ್ಯಾರ್ಥಿಗಳು ತರಗತಿವಾರು, ವಿಷಯವಾರು ಕಾರ್ಡಗಳನ್ನ ಸುಲಭವಾಗಿ, ಸರಳವಾಗಿ ಚಟುವಟಿಕೆಯುಕ್ತವಾಗಿ ಪಾಲಗೊಂಡು ಕಾರ್ಡಗಳನ್ನು ತೆಗೆದುಕೊಳ್ಳುವ ಹಾಗೂ ಇಡುವ ಕೆಲಸವನ್ನು ಮಾಡುತ್ತಾರೆ.







**ನಲಿ ಕಲಿ ಘಟಕಗಳು:–**

ನಮ್ಮ ಶಾಲೆಯಲ್ಲಿ 2 ನಲಿ ಕಲಿ ಘಟಕಗಳಿವೆ, 1 ರಿಂದ 3ನೇ ತರಗತಿಗೆ 49 ವಿದ್ಯಾರ್ಥಿಗಳಿರುವುದರಿಂದ 2 ಘಟಕಗಳನ್ನು ಮಾಡಲಾಗಿದೆ. ಸದರಿ ಘಟಕಗಳನ್ನು ಶ್ರೀ ಸುರೇಶಪ್ಪ, ಶ್ರೀಮತಿ ಪೂರ್ಣಿಮಾ ಆರ್.ಜೆ ಹಾಗೂ ಶ್ರೀಮತಿ ಮಂಜುಳಾಕ್ಷಿ ಇವಗಳು ನಿರ್ವಹಿಸುತ್ತಿದ್ದಾರೆ, ಸುಮಾರು 10000ರೂ ಗಳಲ್ಲಿ ನಲಿ ಕಲಿ ಕೊಠಡಿಗೆ ಕಾನಫರೇನ್ಸ ಟೇಬಲ್ ವ್ಯೆವಸ್ಥೆ ಮಾಡಲಾಗಿದು ವಿದ್ಯಾರ್ಥಿಗಳು ವೃತ್ತಾಕಾರದಲ್ಲಿ ಕುರ್ಚಿಯಲ್ಲಿ ಕುಳಿತು ಚಟವಟಿಕಗಳಲ್ಲಿ ತೊಡಗುತ್ತಾರೆ.



## ನಲಿ ಕಲಿ ಕೊಠಡಿ:–

ನಲಿ ಕಲಿ ಕೊಠಡಿಗೆ ಸಂಬಂಧಿಸಿದಂತೆ ನಲಿ ಕಲಿ ಕೊಠಡಿಗಳನ್ನು ವಾಲ್ ಸ್ಲೇಟ್ ಹಾಗೂ ಗೊಡೆ ಬರಹಗಳನ್ನು ಸುಮಾರು 9000ರೂ ಗಳ ಅಂದಾಜು ವೆಚ್ಚದಲ್ಲಿ ತಯಾರಿಸಲಾಗಿರುತ್ತದ್ದೆ.





